ಸ್ವಪ್ನಳ ಕತೆ ಮುಂದುವರಿದಿತ್ತು; ಎಲ್ಲರ ಗಮನವೂ ಮಗುವಿನ ಮೇಲಿದ್ದರೆ, ಮಗುವಿನ ಅಪ್ಪ ಅಕ್ಷಯಕುಮಾರ ಮಾತ್ರ ಸ್ವಪ್ನಳ 'ಮೊಟಕಿ'ಗೆ ಕಾರಣವನ್ನು ಬಗೆಯುವುದರಲ್ಲೇ ತಲೆಕೆಡಿಸಿಕೊಳ್ಳತೊಡಗಿದ್ದ. ಅಕ್ಷಯಕುಮಾರ ಸ್ವಪ್ನಳ ಮೊಟಕಿಗೆ ಮಾನಸಿಕವಾಗಿ ಸ್ವಲ್ಪ ಹಗುರಗೊಳ್ಳುವ ಬದಲು ಹೊಸ ಯೋಚನೆಯ ಗುಂಗಿಗೇ ಬಿದ್ದುಬಿಟ್ಟಿದ್ದ. 'ಸೊಪ್ಪಿ' ತನ್ನ ತಲೆಗೆ ಮೊಟಕಿದ್ದು. ತಾನು ಆಕೆಯ ಕಸಿನ್ ಎಂಬ ಸಲಿಗೆಯಿಂದಿರಬಹುದೇ? ಅಥವಾ ಬಾಲ್ಯದ ತಮ್ಮ 'ಜಗಳ ರಂಪಾಟ'ಗಳ ನೆನಪು ಆಕೆಯಲ್ಲಿ ಎದ್ದು ಬಂದಿರಬಹುದೇ? ಅಥವಾ ಲೋ... ಮೂರ್ಖಾ... ನಿನ್ನ ಮಗುವಿನ 'ಈ ಸ್ಥಿತಿಗೆ' ನೀನೇ ಕಾರಣನಾದಿಯಲ್ಲೋ ಎಂಬ ಒಳಸಿಟ್ಟಿರಬಹುದೇ... ಎಂಬ ಚಿಂತೆಯಲ್ಲೇ ಆತ ಬಿದ್ದು ಒದ್ದಾಡತೊಡಗಿದ್ದ.

ಇದೀಗ... 'ಸೊಪ್ಪಿ'ಯ ಕತೆ ಕೇಳುತ್ತಾ, ಕೇಳುತ್ತಾ ನಿಧಾನಕ್ಕೆ ಮಗುವಿನ ಕತ್ತಿನ ಚಲನೆಯಲ್ಲೇ ಒಂದು ರೀತಿಯ ಮೊಗ್ಗು ಬಿರಿವಷ್ಟೇ ಲಘುವಾದ ಚಲನೆ 'ಲವಲವಿಕೆ' ಕಾಣಿಸಿಕೊಂಡಾಗ, ಕುಮುದಳು ಮಾತ್ರವಲ್ಲ ಆಕೆಯ ಅಕ್ಕ ತಂಗಿಯಂದಿರು ಕೂಡ 'ಇದು ತಾವು ನಂಬುತ್ತಿರುವ ಕಟೀಲಿನ ದೇವಿಯ ಮಹಿಮೆಯೇ ಸರಿ; ಈ 'ಸೊಪ್ಪಿ'ಯನ್ನು ಇಲ್ಲಿಗೆ ಈ ಸಂಕಷ್ಟದ ಕ್ಷಣಕ್ಕೆ ಕಳುಹಿಸಿಕೊಟ್ಟವಳು ಆ ದೇವಿಯೇ' ಇರಬೇಕು ಎಂಬ ಭಾವದಿಂದ ಒಂದು ರೀತಿಯ ನಿರಾಳತೆಯ ಭಾವವನ್ನು ಅನುಭವಿಸುತ್ತ, ಅಪಾರ ಕೃತಜ್ಞತೆಯಿಂದ 'ಸೊಪ್ಪಿ'ಯನ್ನು ದಿಟ್ಟಿಸಿದ್ದರು.

ಹಾಗೆ ನೋಡಿದರೆ, ಈ 'ಸೊಪ್ಪಿ', ರಾಮಯ್ಯಾಳ್ವರಿಗಿಂತ ಅಕ್ಷಯಕುಮಾರನಿಗೆ ತೀರಾ ಹತ್ತಿರದ ಸಂಬಂಧಿ. ಆದರೆ ಆಕೆಗೆ ರಾಮ್ಮಯ್ಯಾಳ್ವರ ಮನೆಮಂದಿಯೆಂದರೆ ಅಕ್ಷಯಕುಮಾರನ ಮನೆಮಂದಿಗಿಂತಲೂ ಒಂದು ಮುಷ್ಟಿ ಜಾಸ್ತಿಯೇ ಪ್ರೀತಿ. ರಾಮಯ್ಯಾಳ್ವರ ಹೆಂಡತಿಯ ಸ್ವಂತ ದೊಡ್ಡಪ್ಪನ ಮಗನ ನಾದಿನಿಯ ಮಗಳು ಈ 'ಸೊಪ್ಪಿ'. ತಮೇರುಗುತ್ತಿನ ದೂಮಣ್ಣ ಪರಾರಿಯವರ ಐದು ಹೆಣ್ಮಕ್ಕಳಲ್ಲಿ ಕಿರಿಮಗಳಾದ ಸುಖಲತಳ ಹಿರಿಮಗಳು ಈಕೆ. ಚಿಕ್ಕಂದಿನಲ್ಲಿ 'ಸೊಪ್ಪಿ'ಯ ತಾಯಿ ಸುಖಲತಳಿಗೆ ರಾಮಯ್ಯಾಳ್ವರ ಹೆಂಡತಿ ಕಮಲಕ್ಕೆಯವರೆಂದರೆ ಜೀವದಲ್ಲಿ ಜೀವ. ತನ್ನ ಸ್ವಂತ ಅಕ್ಕ ನಳಿನಕ್ಕನಿಗಿಂತಲೂ ಹೆಚ್ಚು ಪ್ರೀತಿ ಈಕೆಗೆ ಕಮಲಕ್ಕೆಯವರ ಮೇಲೆ.

ಮಕ್ಕಳು ಸಣ್ಣವರಿದ್ದಾಗಲೆಲ್ಲ, ಶಾಲೆಗೆ ಬೇಸಿಗೆ ರಜೆ ಸಿಗಲಿಕ್ಕಿಲ್ಲ. ಅಷ್ಟರಲ್ಲೆ ಈಕೆಯ ತಾಯಿ ಸುಖಲತಳಂತು ಮಕ್ಕಳನ್ನು ಕಟ್ಟಿಕೊಂಡು ತನ್ನ ತಾಯಿಯ ಕುಮೇರುಗುತ್ತಿಗೆ ಅಥವಾ ತಂದೆ ದೂಮಣ್ಣ ಪರಾರಿಗಳಿರುವ ತಮೇರು ಗುತ್ತಿಗೆ ನಡೆಯುವ ಬದಲು ಅವಳು ರಜೆಯ 'ಪೆಟ್ಟಿಗೆ ಕಟ್ಟುತ್ತಿದ್ದುದು' ಸೀದ ರಾಮಯ್ಯಾಳ್ವರ ಮೇಲಚ್ಚಿಲಿಗೆ. ಮೇಲಚ್ಚಿಲು ಇರುವುದೇ ಕಾಡಿನ ಅಂಚಿನಲ್ಲಿರುವ ನದಿ ಸೆರಗಲ್ಲಿ. ಗದ್ದೆ ತೋಟಗಳ ನಡುವೆ ಇರುವ ಮೇಲಚ್ಚಿಲಿನ ಆ ಮೂರಂಕಣದ ವಿಶಾಲ ಮನೆಯಲ್ಲಿ ಹದಿನೈದು ಇಪ್ಪತ್ತು ದಿನಗಳಿದ್ದ ನಂತರವಷ್ಟೇ ಆಕೆಗೆ ನೆನಪಾಗುತ್ತಿದ್ದುದು ತನ್ನ ಅಪ್ಪನ ತಮೇರುಗುತ್ತು ಅಥವಾ ತಾಯಿಯ ಕುಮೇರುಗುತ್ತು. ಸೊಪ್ಪಿಯ ತಾಯಿ ಸುಖಲತಳಿಗೆ ರಾಮಯ್ಯಾಳ್ವರ ಮೇಲಚ್ಚಿಲು ಎಷ್ಟು ಇಷ್ಟವೋ... ಅಷ್ಟೇ ಇಷ್ಟ ಸೊಪ್ಪಿಗೂ ಕೂಡ. ರಾಮಯ್ಯಾಳ್ವರ ಮಡದಿ ಕಮಲಕ್ಕೆಯವರು ಒಂದು ಹೊತ್ತಿಗೆ ಎರಡು ಕಳಸೆ ಅನ್ನ ಬೇಯುತ್ತಿದ್ದಂತಹ ದೊಡ್ಡ ಕೂಡುಕುಟುಂಬದಿಂದ ಬಂದವರು. ಅಂತಹ ದೊಡ್ಡ ಮನೆತನದಿಂದ ಬಂದವರಾದ್ದರಿಂದಲೇ ಅವರದ್ದು ಸದಾ ಪ್ರೀತಿಯನ್ನು ಮೊಗೆದು ಕೊಡುವ ಗುಣ. ಈ ಗುಣದಿಂದಲೋ ಏನೋ... ರಜೆ ಬಂತೆಂದರೆ ಸಾಕು, ಕಮಲಕ್ಕೆಯವರ ಕರುಳು ಬಳ್ಳಿಯವರು ಮಾತ್ರವಲ್ಲ, ಅವರ ಗಂಡನ ಸಂತಾನದ ಬಳ್ಳಿಗಳು ಕೂಡಾ ಇತ್ತಲೇ ಹರಿದು